ಸಮಸ್ಯೆ ಸಣ್ಣದೇನಲ್ಲ. ಯಾರೋ ದಿಢೀರನೆ ಎದುರಿಗೆ ಬಂದು ನಾನು ನಿನ್ನ ತಮ್ಮನೋ, ಅಣ್ಣನೋ ಎಂದರೆ ಹೇಗಾದೀತು? ಜೀವಮಾನದಲ್ಲೇ ಅವನನ್ನು ಕಂಡಿದ್ದಿಲ್ಲ. ಇದ್ದಕ್ಕಿದ್ದ ಹಾಗೆ ಕೋರ್ಟಿನಿಂದ ನೋಟಿಸು ಕಳಿಸಿ ತಾನೂ ಅಪ್ಪನ ಹೆಸರಿಗೆ, ಆಸ್ತಿಗೆ ವಾರಸುದಾರ ಎಂದು ಹೇಳಿದಾಗ ಏನನ್ನೋಣ?

ರಾವ್‌ಬಹದ್ದೂರರು ಸತ್ತು ಹತ್ತು ವರ್ಷಗಳಾಯಿತು. ಅದಕ್ಕೂ ಮುನ್ನ ಎರಡು ವರ್ಷಗಳ ಹಿಂದೆ ಅವರ ಹೆಂಡತಿ ಪದ್ಮಾವತಮ್ಮನವರೂ ಪ್ರಾಣ ಬಿಟ್ಟಾಗಿತ್ತು. ಇಬ್ಬರೂ ಎಂದೂ ಇಂತಹುದೊಂದು ಸಂಗತಿ ಇರಬಹುದು ಎಂದೂ ಸೂಚನೆ ಕೊಟ್ಟಿದ್ದಿಲ್ಲ. ಅಪ್ಪನೇ ವಿಲ್ ಮಾಡಿದ್ದಲ್ಲವೇ? ತಮಗಿನ್ನೊಬ್ಬ ಮಗ ಇದ್ದಾನೆ ಎಂದು ಅವರಿಗೆ ತಿಳಿದಿದ್ದರೆ ವಿಲ್ಲಿನಲ್ಲಿಯೇ ಏನಾದರೂ ಬರೆಯಬಹುದಿತ್ತಲ್ಲ. ಆದರೆ ಹೀಗೆ ದಿಢೀರನೆ ಬಂದು ತಾನು ಅಪ್ಪನ ಮಗ ಎಂದು ಹೇಳಿಕೊಳ್ಳುತ್ತಾನಲ್ಲ, ಹಾದರಕ್ಕೆ ಹುಟ್ಟಿದವ. ಇದನ್ನೇ ಕೋರ್ಟಿಗೆ ಹೇಳಿದ್ದೂ ಆಯಿತು. ಆದರೆ ಅವನ ಕಡೆಯ ಲಾಯರು ಇದು ಆಸ್ತಿಯ ವಿಚಾರವಲ್ಲ. ವ್ಯಕ್ತಿ, ವ್ಯಕ್ತಿಯ ಮೇಲಿನ ದೂರಲ್ಲ. ಇಷ್ಟರವರೆಗೆ ತಂದೆಯಿದ್ದೂ ಅನಾಥನೆಂದು ಪಟ್ಟ ಕಟ್ಟಿಸಿಕೊಂಡದ್ದನ್ನು ಅಳಿಸಿಕೊಳ್ಳಲು ಈ ದಾವೆ ಎಂದು ತನ್ನ ಕಕ್ಷಿದಾರನ ಪರವಾಗಿ ವಾದಿಸಿದ್ದ. ಕೋರ್ಟು ಅದನ್ನು ಒಪ್ಪಿಕೊಂಡಿತ್ತು. ಏಕೆಂದರೆ ಅವನ ಶಾಲಾ ದಾಖಲೆಗಳಲ್ಲಿ ಅಪ್ಪನ ಹೆಸರಿತ್ತು. ಅವನಮ್ಮನಿಗೆ ಅಪ್ಪನದೇ ಹೆಸರಿನವನು ಬರೆದ ಪತ್ರಗಳಿದ್ದುವು. ಅದರಲ್ಲಿ ರಾವ್‌ಬಹದ್ದೂರರೂ, ಅವನ ಅಮ್ಮನೂ ಯಾವುದೋ ದೇವಸ್ಥಾನದಲ್ಲಿ ಮದುವೆಯಾದ ಉಲ್ಲೇಖ ಇತ್ತು. ಇದು ಆಗಿದ್ದು ರಾವ್‌ಬಹದ್ದೂರರು ಪದ್ಮಾವತಮ್ಮನವರ ಮದುವೆಯಾಗುವ ಮುನ್ನ. ಕೋರ್ಟು ಅದೇ ದಾಖಲೆಯ ಆಧಾರದ ಮೇಲೆ ದಾವೆಯನ್ನು ದಾಖಲಿಸಿಕೊಂಡಿತ್ತು.

ಅವನ ಅಮ್ಮ, ಅಪ್ಪ ಸತ್ತು ಹೋದರು ಎಂದು ಹೇಳಿದ್ದನ್ನು ಒಪ್ಪಿಕೊಂಡೇ ಬೆಳೆದನಂತೆ. ಕಳೆದ ವರ್ಷ ಅವನ ತಾಯಿ ಸತ್ತಳಂತೆ. ಸಾಯುವ ಮುನ್ನ ನೀನು ಅನಾಥನಲ್ಲ ನಿಮ್ಮ ಅಪ್ಪ ಇಂಥವರು ಎಂದು ಹೇಳಿದಳಂತೆ. ಇಂತಹ ಪ್ರತಿಷ್ಠಿತ ವ್ಯಕ್ತಿಯ ಮಗನಾಗಿದ್ದೂ ತಾನು ಅನಾಥ ಎನ್ನಿಸಿಕೊಳ್ಳಬೇಕಾಯಿತಲ್ಲ ಎಂಬ ಸಿಟ್ಟಿನಿಂದ ತನ್ನ ವಾರಸುದಾರಿಕೆಯನ್ನು ಸ್ಥಾಪಿಸಲು ಈ ದಾವೆ ಹಾಕಿದ್ದಾನಂತೆ.

ಈ ಆಲದಮರದಂತೆ ರಾವ್‌ಬಹದ್ದೂರರು ಎಷ್ಟು ಜನರಿಗೆ ನೆರಳು ನೀಡಿಲ್ಲ, ಬದುಕಿಗೆ ಹಾದಿ ತೋರಿಸಿಲ್ಲ? ಅವರ ಕೆಲಸಗಳೇ ಅವರ ಹೆಸರು ಇನ್ನೂ ಮಾಸಿಲ್ಲದ್ದಕ್ಕೆ ಕಾರಣ. ಆದರೆ ಆ ಒಳ್ಳೆಯತನಕ್ಕೆ ಈಗ ಕೇಡುಗಾಲ ಬಂದಂತಿದೆ. ಇವನ್ಯಾವನೋ ಬಂದು ತಾನು ಅವರಿಗೆ ಹುಟ್ಟಿದವನು ಎನ್ನುತ್ತಿದ್ದಾನೆ. ರಾವ್‌ಬಹದ್ದೂರರು ಹಾದರ ಮಾಡಿದ್ದರೇ? ತಮ್ಮಪ್ಪ ಅಂತಹವರೇ? ಅಣ್ಣತಮ್ಮಂದಿರಿಗೆ ಅವನ ಮೇಲಿನ ಸಿಟ್ಟಿಗೆ ಇದು ಮತ್ತೊಂದು ಕಾರಣ. ಸತೀಶನಿಗಂತೂ ಈಗ ಕೈಕಾಲು ಕಟ್ಟಿ ಹಾಕಿದಂತಾಗಿತ್ತು. ವ್ಯಾಜ್ಯ ತೀರ್ಮಾನವಾಗುವವರೆಗೂ ಆಸ್ತಿಪಾಸ್ತಿಯ ವಿಲೇವಾರಿಯಾಗಲೀ, ಅದರ ಆದಾಯವನ್ನಾಗಲಿ ಕೋರ್ಟಿನ ಅನುಮತಿ ಇಲ್ಲದೆ ಬಳಸಕೂಡದೆಂದು ಇಂಜಂಕ್ಷನ್ ಕೂಡ ಆಗಿತ್ತು. ಸ್ವಂತದ್ದೆನ್ನುವ ಆಸ್ತಿ ಇದ್ದೂ ಇಲ್ಲದಂತೆ ಸತೀಶ ಒದ್ದಾಡುತ್ತಿದ್ದ.

ಅಮೆರಿಕೆಯಲ್ಲಿ ತನ್ನದೇ ಬದುಕು ಕಟ್ಟಿಕೊಂಡ ಅನೀಶನ ಕೊರಗು ಬೇರೆಯದೇ. ವರ್ಷಕ್ಕೊಮ್ಮೆ ರಜೆಯಲ್ಲಿ ಅಪ್ಪನ ತೋಟದ ಮನೆಯಲ್ಲಿ ಹೆಂಡತಿಮಕ್ಕಳ ಜೊತೆ ಬಂದು ಹೋಗುತ್ತಿದ್ದ. ಬಂದಾಗಲೆಲ್ಲ ತನ್ನ ಪಾಲಿನ ಆಸ್ತಿಯ ಆದಾಯವೆಂದು ಅಣ್ಣ ಕೊಟ್ಟದ್ದನ್ನು ಇಲ್ಲೇ